**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1382/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಡಿ ಡಬ್ಲ್ಯೂ01**

**ದಿನಾಂಕಃ 21.02.2026**

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಜಿ ಕೆ ಡಿ ವಕೀಲರಿಂದಃ**

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ 3 ಜನ ಮಕ್ಕಳು. ನನ್ನ ಮಗಳು 5 ನೇ ತರಗತಿಯಲ್ಲಿ, ಮಗ 2 ನೇ ತರಗತಿಯಲ್ಲಿ ಹಾಗೂ 1 ಮಗು ಇದೆ. ನನ್ನ ಇಬ್ಬರು ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರೆ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಾರೆ. ನನ್ನ ಗಂಡನ ಹೆಸರು ಸಾದಿಕ್ ಉಲ್ಲಾ ಎಂದರೆ ಸರಿ. ನನ್ನ ಗಂಡನ ಅಣ್ಣನ ಹೆಸರು ಮುನ್ನಾ ಎಂದರೆ ಸರಿ. ಈಸೂಪ್, ಜಬೀ, ಜಬರಿನ್ ನನ್ನ ಗಂಡನ ಸಹೋದರರು ಎಂದರೆ ಸರಿ. ನನ್ನ ಗಂಡನಿಗೆ 6 ಜನ ಅಣ್ಣಂದಿರು. ನನ್ನ ಗಂಡ ಬೇರೆಯವರ ಚಿಕನ್ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ. ಸದರಿ ಅಂಗಡಿ ಹರಿಹರದ ದೇವಸ್ಥಾನದ ರಸ್ತೆಯಲ್ಲಿ ಇದೆ. ಪಿರ್ಯಾದಿಯಿಂದ ನನಗೆ ನೋಟಿಸ್ ಬಂದಿತ್ತು ಎಂದರೆ ಸರಿ. ಪಿರ್ಯಾದಿ ಮತ್ತು ನನ್ನ ಗಂಡನಿಗೆ ಸುಮಾರು 15–20 ವರ್ಷಗಳಿಂದ ಪರಿಚಯ ಎಂದರೆ ನನಗೆ ಗೊತ್ತಿಲ್ಲ. ನನ್ನ ವಕೀಲರಿಗೆ ಮಾಹಿತಿಯನ್ನು ನನ್ನ ಗಂಡ ನೀಡಿರುತ್ತಾರೆ. ಪ್ರಕರಣಕ್ಕೆ ಸಂಬಂದಿಸಿದಂತೆ ಎಲ್ಲಾ ಮಾಹಿತಿಯನ್ನು ನನ್ನ ಗಂಡ ವಕೀಲರಿಗೆ ನೀಡಿರುತ್ತಾರೆ ಎಂದರೆ ಸರಿ ಹಾಗೂ ನಾನು ಮಾಹಿತಿ ನೀಡಿಲ್ಲ ಎಂದರೆ ಸರಿ. ಪಿರ್ಯಾದಿಯಿಂದ ಬಂದ ನೋಟಿಸಗೆ ಉತ್ತರ ನೀಡಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿಗೆ ನಾನು 50 ಸಾವಿರ ರೂಗಳನ್ನು ನನ್ನ ಮೊಬೈಲನಿಂದ ಫೋನ್ ಪೇ ಮಾಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಯ ಪರಿಚಯ ಇದ್ದರೂ ಸಹ ಹಣ ನೀಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಯನ್ನು ನಾನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಪಿರ್ಯಾದಿಯ ಮನೆಗೆ ಹಾಗೂ ಪಿರ್ಯಾದಿ ನಮ್ಮ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ಗಂಡನಿಂದ ನಿಮ್ಮ ಚಕ್ ನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ದೂರು ನೀಡಿದ್ದಾರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚೆಕ್ ದುರುಪಯೋಗ ಆದಾಗ ದೂರು ಕೊಡಬೇಕು ಎಂದು ನನಗೆ ಮಾಹಿತಿ ಇಲ್ಲ. ನ್ಯಾಯಾಲಯಕ್ಕೆ ಆಧಾರ ಕಾರ್ಡ, ರೇಶನ್ ಕಾರ್ಡ ನೀಡಿರುತ್ತೇನೆ. ಪಿರ್ಯಾದಿ ನನ್ನ ಗಂಡನಿಂದ ಚೆಕ್ ನ್ನು ಪಡೆದು ಚೆಕ್ ನ್ನು ಹಿಂದಿರುಗಿಸಲು ಇಂದು ನಾಳೆ ಎಂದು ಮುಂದೂಡುತ್ತಾ ಬಂದಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಹಾಗೂ ಪಿರ್ಯಾದಿ ಹಣವನ್ನು ಆಗಾಗ ಕೊಡುವುದು ತೆಗೆದುಕೊಳ್ಳುವುದು ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ 50 ಸಾವಿರ ರೂ ಹಣ ಬೇರೆ ವ್ಯವಹಾರಕ್ಕೆ ಸಂಬಂದಿಸಿದ್ದು ಪ್ರಸ್ತುತ ಪ್ರಕರಣಕ್ಕೆ ಸಂಬಂದಿಸಿದ್ದಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಪಿ.1 ನನ್ನ ಚೆಕ್ ಎಂದರೆ ಸರಿ. ಅದರಲ್ಲಿರುವ ಸಹಿ ನಿಪಿ.1(ಎ) ನನ್ನ ಸಹಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಗಂಡ ಖಾಲಿ ಚೆಕ್ ಕೊಟ್ಟಿದ್ದರು ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಗಂಡನನ್ನು ನನ್ನ ಚೆಕ ಯಾವ ಕಾರಣಕ್ಕಾಗಿ ನೀಡಿದ್ದೀರಿ ಎಂದು ನಾನು ಅವರನ್ನು ಕೇಳಿಲ್ಲ. ನನ್ನ ಚೆಕ್ ದುರುಪಯೋಗವಾದ ಬಗ್ಗೆ ನಾನು ಬ್ಯಾಂಕಿಗೆ ಮಾಹಿತಿ ನೀಡಿಲ್ಲ. ನಿಪಿ.1 ಎ ಮತ್ತು ನಿಪಿ.5 ರಲ್ಲಿರುವ ಸಹಿ ನಿಮ್ಮದೇ ಎಂದರೆ ಸಾಕ್ಷಿಯು ನಿಪಿ.5 ರಲ್ಲಿರುವ ಸಹಿ ನನ್ನದು ಆದರೆ ನಿಪಿ.1 ರಲ್ಲಿರುವ ಸಹಿ ನನ್ನದಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿಗೆ ಮೋಸ ಮಾಡಬೇಕು ಎಂಬ ಉದ್ದೇಶದಿಂದ ನಾನು ನಿಪಿ.1 ರಲ್ಲಿ ಬೇರೆ ರೀತಿ ಸಹಿ ಮಾಡಿ ನಿಪಿ.1 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ಕ್ಕೆ ನಾನೇ ಸಹಿ ಮಾಡಿ ನೀಡಿದ್ದರೂ ಸಹ ಸಹಿ ಮಾಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಹಣವನ್ನು ಮರಳಿ ನೀಡಿದ್ದರೆ ನೀವು ಪಿರ್ಯಾದಿ ಕಳುಹಿಸಿದ ನೋಟಿಸಗೆ ಉತ್ತರ ನೀಡುತ್ತಿದ್ದಿರಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ಲಕ್ಷ ರೂ ಹಣ ಕೊಡುವುದು ಬಾಕಿ ಇರುವುದರಿಂದಲೇ ಪ್ರತಿಉತ್ತರ ನೀಡಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಕೇಸು ನಡೆಸುವ ಎಂದು ಸುಮ್ಮನಾದೆ ಎಂದು ನುಡಿಯುತ್ತಾರೆ. ಪಿರ್ಯಾದಿ ನೀಡಿದ ನೋಟಿಸಗೆ ಉತ್ತರ ಕೊಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿ ನಮ್ಮ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ದೂರು ನೀಡಲು ಪ್ರಯತ್ನ ಪಟ್ಟಿಲ್ಲ. ನಾನು ಮತ್ತು ನನ್ನ ಗಂಡ ಪಿರ್ಯಾದಿಯಿಂದ ಹಣ ಪಡೆದಿದ್ದರೂ ಸಹ ಪಿರ್ಯಾದಿ ಹಣ ಕಬಳಿಸಬೇಕೆಂಬ ಉದ್ದೇಶದಿಂದ ನಾನು ಮತ್ತು ನನ್ನ ಗಂಡ ಸೇರಿಕೊಂಡು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ